## ಹೃದಯ ವೈಫಲ್ಯಕ್ಕೆ ಸಂಬಂಧಿಸಿದ ಸ್ವಆರೈಕೆಯ ಸೂಚ್ಯಂಕ

ಎಲ್ಲಾ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು

ಕಳೆದ ಒಂದು ತಿಂಗಳಲ್ಲಿ ನಿಮ್ಮ ಆರೋಗ್ಯ ಹೇಗಿತ್ತು ಎಂದು ನೆನಪಿಸಿಕೊಂಡು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.

### ವಿಭಾಗ ಎ

ಹೃದಯ ವೈಫಲ್ಯಕ್ಕೆ ಒಳಗಾದ ರೋಗಿಗಳು ಕೈಗೊಳ್ಳುತ್ತಿದ್ದ ಉಪಕ್ರಮಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ. ನೀವು ಅವುಗಳನ್ನು ಎಷ್ಟು ಪ್ರಮಾಣದಲ್ಲಿ ಕೈಗೊಳ್ಳುತ್ತಿದ್ದಿರಿ ಎಂದು ಉತ್ತರಿಸಿ.

| | ಇಲ್ಲವೇ ಇಲ್ಲ | | ಕೆಲವೊಮ್ಮೆ | | ಯಾವಾಗಲೂ |
|---|---|---|---|---|---|
| 1. ಅನಾರೋಗ್ಯ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸುವುದು (ಉದಾ: ಕೈಗಳನ್ನು ತೊಳೆಯುವುದು)? | 1 | 2 | 3 | 4 | 5 |
| 2. ವ್ಯಾಯಾಮ ಮಾಡುವುದು (ಉದಾ: ವೇಗವಾಗಿ ನಡೆಯುವುದು, ಮೆಟ್ಟಲು ಹತ್ತುವುದು)? | 1 | 2 | 3 | 4 | 5 |
| 3. ಉಪ್ಪಿನ ಸೇವನೆಯನ್ನು ಕಡಿಮೆ ಮಾಡುವುದು? | 1 | 2 | 3 | 4 | 5 |
| 4. ನಿಯಮಿತವಾಗಿ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು? | 1 | 2 | 3 | 4 | 5 |
| 5. ಔಷಧಿಗಳನ್ನು ತಪ್ಪದೆ ತೆಗೆದುಕೊಳ್ಳುವುದು? | 1 | 2 | 3 | 4 | 5 |
| 6. ಮನೆಯ ಹೊರಗೆ ಊಟ ಮಾಡುವಾಗ ಉಪ್ಪು ಕಡಿಮೆ ಇರುವ ಆಹಾರಪದಾರ್ಥಗಳನ್ನು ಸೇವಿಸುವುದು? | 1 | 2 | 3 | 4 | 5 |
| 7. ವರ್ಷಕ್ಕೊಮ್ಮೆ ಫ್ಲೂ ಜ್ವರಕ್ಕೆ ಚುಚ್ಚುಮದ್ದು ತೆಗೆದುಕೊಳ್ಳುವುದು? | 1 | 2 | 3 | 4 | 5 |
| 8. ಸಂಬಂಧಿಕರ ಅಥವಾ ಸ್ನೇಹಿತರ ಮನೆಗೆ ಹೋದಾಗ ಉಪ್ಪು ಕಡಿಮೆ ಇರುವ ಆಹಾರ ಸೇವಿಸುವುದು? | 1 | 2 | 3 | 4 | 5 |
| 9. ಔಷಧ ತೆಗೆದುಕೊಳ್ಳಲು ಮರೆತು ಹೋಗದಂತೆ ಯಾವುದಾದರೂ ವಿಧಾನವನ್ನು ರೂಪಿಸುವುದು? | 1 | 2 | 3 | 4 | 5 |
| 10. ಸೇವಿಸುವ ಔಷಧಗಳ ಬಗ್ಗೆ ವೈದ್ಯರೊಡನೆ ಕೇಳಿ ತಿಳಿದುಕೊಳ್ಳುವುದು? | 1 | 2 | 3 | 4 | 5 |

**ವಿಭಾಗ ಬಿ**

ಹೃದಯ ವೈಫಲ್ಯಕ್ಕೆ ಒಳಗಾದ ರೋಗಿಗಳು ಗಮನಿಸುವ ತಮ್ಮಲ್ಲಿ ಆಗುವ ಬದಲಾವಣೆಗಳನ್ನು ಇಲ್ಲಿ ನೀಡಲಾಗಿದೆ. ನೀವು ಅವುಗಳನ್ನು ಎಷ್ಟು ಸಲ ಗಮನಿಸುತ್ತಿದ್ದಿರಿ?

| | ಇಲ್ಲವೇ ಇಲ್ಲ | | ಕೆಲವೊಮ್ಮೆ | | ಯಾವಾಗಲೂ |
|---|---|---|---|---|---|
| 11. ಪ್ರತಿದಿನ ನಿಮ್ಮ ತೂಕವನ್ನು ಪರೀಕ್ಷಿಸುತ್ತಿದ್ದಿರಾ? | 1 | 2 | 3 | 4 | 5 |
| 12. ನಿಮ್ಮ ಆರೋಗ್ಯದ ಬಗ್ಗೆ ಏನು ಅನಿಸುತ್ತದೆ ಎಂಬುದರ ಕಡೆಗೆ ಗಮನ ಕೊಡುತ್ತಿದ್ದಿರಾ? | 1 | 2 | 3 | 4 | 5 |
| 13. ಔಷಧಿಗಳಿಂದ ಅಡ್ಡಪರಿಣಾಮ ಉಂಟಾಗಿದೆಯೇ ಎಂದು ಗಮನಿಸುತ್ತಿದ್ದಿರಾ? | 1 | 2 | 3 | 4 | 5 |
| 14. ದೈನಂದಿನ ಕೆಲಸಗಳನ್ನು ಮಾಡುವಾಗ ಎಂದಿಗಿಂತ ಹೆಚ್ಚು ಆಯಾಸವಾಗುತ್ತದೆಯೇ ಎಂದು ಗಮನಿಸುತ್ತೀರಾ? | 1 | 2 | 3 | 4 | 5 |
| 15. ನಿಮ್ಮ ಆರೋಗ್ಯದ ಬಗ್ಗೆ ವೈದ್ಯರೊಡನೆ ವಿಚಾರಿಸುತ್ತಿದ್ದಿರಾ? | 1 | 2 | 3 | 4 | 5 |
| 16. ಯಾವುದೇ ಅಸ್ವಾಭಾವಿಕ ಲಕ್ಷಣಗಳು ಕಾಣಿಸಿಕೊಳ್ಳುತ್ತವೆಯೇ ಎಂದು ಗಮನಿಸುತ್ತಿದ್ದಿರಾ? | 1 | 2 | 3 | 4 | 5 |
| 17. ಕಾಲಿನ ಗಂಟುಗಳು ಬಾತುಕೊಂಡಿವೆಯೇ ಎಂದು ಗಮನಿಸುತ್ತಿದ್ದಿರಾ? | 1 | 2 | 3 | 4 | 5 |
| 18. ಸ್ನಾನ ಮಾಡುವಾಗ ಅಥವಾ ಬಟ್ಟೆ ಧರಿಸುವಾಗ ಏದುಸಿರು ಬಿಡಬೇಕಾಗುತದೆಯೇ ಎಂದು ಗಮನಿಸುತ್ತೀರಾ? | 1 | 2 | 3 | 4 | 5 |
| 19. ಅಸ್ವಾಭಾವಿಕ ಲಕ್ಷಣಗಳು ಕಂಡು ಬಂದರೆ ಅವುಗಳನ್ನು ಬರೆದಿಡುತ್ತಿದ್ದಿರಾ? | 1 | 2 | 3 | 4 | 5 |

**ಕಳೆದ ಸಲ ನಿಮಗೆ ಈ ಲಕ್ಷಣಗಳು ಕಾಣಿಸಿಕೊಂಡಾಗ ...**

(ಒಂದು ಅಂಕೆಗೆ ವೃತ್ತ ಹಾಕಿ)

| | ಲಕ್ಷಣಗಳು ಕಾಣಿಸಿಕೊಂಡಿಲ್ಲ | ನಾನು ಲಕ್ಷಣಗಳನ್ನ ಗಮನಿಸಲಿಲ್ಲ | ಲಕ್ಷಣಗಳನ್ನ ಕ್ಷಣ ಗಮನಿಸಲಿಲ್ಲ | | ಸ್ವಲ್ಪ ಸಮಯದಲ್ಲಿ ಗಮನಿಸಿದ್ದೆ | | ಕ್ಷಣ ಗಮನಿಸಿದ್ದೆ |
|---|---|---|---|---|---|---|---|
| 20. ಅಸ್ವಾಭಾವಿಕ ಲಕ್ಷಣಗಳನ್ನು ಎಷ್ಟು ಬೇಗ ನೀವು ಗಮನಿಸಿದ್ದಿರಿ? | N/A | 0 | 1 | 2 | 3 | 4 | 5 |
| 21. ಈ ಲಕ್ಷಣವು ಹೃದಯ ವೈಫಲ್ಯದಿಂದ ಉಂಟಾದದ್ದು ಎಂದು ನಿಮಗೆ ಎಷ್ಟು ಬೇಗ ತಿಳಿಯಿತು? | N/A | 0 | 1 | 2 | 3 | 4 | 5 |

**ವಿಭಾಗ ಸಿ**

ಹೃದಯ ವೈಫಲ್ಯಕ್ಕೆ ಒಳಗಾದ ರೋಗಿಗಳು ಅದರ ಲಕ್ಷಣಗಳನ್ನು ನಿಯಂತ್ರಿಸಲು ಏನು ಮಾಡುತ್ತಾರೆ ಎಂಬುದಕ್ಕೆ ಸಂಬಂಧಿಸಿದ ಹೇಳಿಕೆಗಳನ್ನು ಇಲ್ಲಿ ನಿಡಲಾಗಿದೆ. ನಿಮ್ಮಲ್ಲಿ ಅವು ಕಾಣಿಸಿಕೊಂಡಾಗ ನೀವು ಅವುಗಳನ್ನು ಎಷ್ಟರ ಮಟ್ಟಿಗೆ ಬಳಸಿಕೊಂಡಿದ್ದೀರಿ?

(ಒಂದು ಅಂಕೆಗೆ ವೃತ್ತ ಹಾಕಿ)

| | ಇಲ್ಲ | | ಸ್ವಲ್ಪ ಮಟ್ಟಿಗೆ | | ಬಹಳ ಮಟ್ಟಿಗೆ |
|---|---|---|---|---|---|
| 22. ಆ ದಿನದ ಉಪ್ಪಿನ ಸೇವನೆಯನ್ನು ಇನ್ನಷ್ಟು ಕಡಿಮೆ ಮಾಡಿದ್ದೀರಾ? | 1 | 2 | 3 | 4 | 5 |
| 23. ದ್ರವಾಹಾರದ ಸೇವನೆಯನ್ನು ಕಡಿಮೆ ಮಾಡಿದ್ದೀರಾ? | 1 | 2 | 3 | 4 | 5 |
| 24. ಔಷಧ ತೆಗೆದುಕೊಂಡಿದ್ದೀರಾ? | 1 | 2 | 3 | 4 | 5 |
| 25. ವೈದ್ಯರೊಡನೆ ಸಲಹೆ ಕೇಳಿದ್ದೀರಾ? | 1 | 2 | 3 | 4 | 5 |
| 26. ಕುಟುಂಬ ಅಥವಾ ಸ್ನೇಹಿತರ ಸಲಹೆ ಕೇಳಿದ್ದೀರಾ? | 1 | 2 | 3 | 4 | 5 |
| 27. ಅಸ್ವಾಭಾವಿಕ ಲಕ್ಷಣಗಳು ಕಾಣಿಸಿಕೊಳ್ಳಲು ಕಾರಣವೇನೆಂದು ಕಂಡು ಹಿಡಿಯಲು ಪ್ರಯತ್ನಿಸಿದ್ದೀರಾ? | 1 | 2 | 3 | 4 | 5 |
| 28. ಆರಾಮವೆನಿಸುವವರೆಗೆ ಶ್ರಮದ ಕೆಲಸ ಮಾಡದೇ ಇದ್ದಿರಾ? | 1 | 2 | 3 | 4 | 5 |

ಕಳೆದ ಸಲ ಅಸ್ವಾಭಾವಿಕ ಲಕ್ಷಣಗಳು ಕಾಣಿಸಿಕೊಂಡಾಗ ನೀವು ಪಡೆದುಕೊಂಡ ಚಿಕಿತ್ಸೆಯನ್ನು ನೆನಪಿಸಿಕೊಳ್ಳಿ...

(ಒಂದು ಅಂಕೆಗೆ ವೃತ್ತ ಹಾಕಿ)

| | ನಾನು ಏನೂ ಮಾಡಲಿಲ್ಲ | ಗೊತ್ತಿಲ್ಲ | | ಸ್ವಲ್ಪ ಮಟ್ಟಿಗೆ ಹೌದೆನಿಸುತ್ತದೆ | | ಖಂಡಿತಾ ಹೌದು |
|---|---|---|---|---|---|---|
| 29. ನೀವು ಪಡೆದುಕೊಂಡ ಚಿಕಿತ್ಸೆಯಿಂದ ನಿಮ್ಮ ಆರೋಗ್ಯ ಸುಧಾರಿಸಿತ್ತೇ? | 0 | 1 | 2 | 3 | 4 | 5 |

**ವಿಭಾಗ ಡಿ**

ಒಟ್ಟಾರೆ ಹೇಳುವುದಾದರೆ ಕೆಳಗಿನವುಗಳ ಬಗ್ಗೆ ನಿಮಗೆ ಎಷ್ಟು ಆತ್ಮವಿಶ್ವಾಸವಿದೆ:

(ಒಂದು ಅಂಕೆಗೆ ವೃತ್ತ ಹಾಕಿ)

| | ಆತ್ಮವಿಶ್ವಾಸವಿಲ್ಲ | | ಸ್ವಲ್ಪ ಆತ್ಮವಿಶ್ವಾಸವಿದೆ | | ತುಂಬಾ ಆತ್ಮವಿಶ್ವಾಸವಿದೆ |
|---|---|---|---|---|---|
| 30. ಯಾವುದೇ ಅಸ್ವಾಭಾವಿಕ ಲಕ್ಷಣಗಳು ಕಾಣಿಸಿಕೊಳ್ಳದಂತೆ ಆರೋಗ್ಯ ಕಾಪಾಡಿಕೊಳ್ಳುವುದು? | 1 | 2 | 3 | 4 | 5 |
| 31. ನಿಯಮಿತವಾಗಿ ಔಷಧ ತೆಗೆದುಕೊಳ್ಳುವುದು? | 1 | 2 | 3 | 4 | 5 |
| 32. ಕಷ್ಟವೆನಿಸಿದರೂ ನಿಯಮಿತವಾಗಿ ಚಿಕಿತ್ಸೆ ಪಡೆದುಕೊಳ್ಳುವುದು? | 1 | 2 | 3 | 4 | 5 |
| 33. ಯಾವಾಗಲೂ ಆರೋಗ್ಯದ ಕಡೆ ಗಮನ ಕೊಡುವುದು? | 1 | 2 | 3 | 4 | 5 |
| 34. ಕಷ್ಟವೆನಿಸಿದರೂ ಆರೋಗ್ಯಸ್ಥಿತಿಯನ್ನು ಪ್ರತಿನಿತ್ಯ ಗಮನಿಸುತ್ತಿರುವುದು? | 1 | 2 | 3 | 4 | 5 |
| 35. ಆರೋಗ್ಯದಲ್ಲಿ ಬದಲಾವಣೆಗಳನ್ನು ಗುರುತಿಸುವುದು? | 1 | 2 | 3 | 4 | 5 |
| 36. ಅಸ್ವಾಭಾವಿಕ ಲಕ್ಷಣಗಳ ಗಂಭೀರತೆಯನ್ನು ತಿಳಿದುಕೊಳ್ಳುವುದು? | 1 | 2 | 3 | 4 | 5 |
| 37. ಅಸ್ವಾಭಾವಿಕ ಲಕ್ಷಣಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳುವುದು? | 1 | 2 | 3 | 4 | 5 |
| 38. ಕಷ್ಟವಾದರೂ ಅಸ್ವಾಭಾವಿಕ ಲಕ್ಷಣಗಳನ್ನು ಹೋಗಲಾಡಿಸಲು ಪರಿಹಾರ ಕಂಡು ಕೊಳ್ಳುವುದು? | 1 | 2 | 3 | 4 | 5 |
| 39. ಚಿಕಿತ್ಸೆ ಎಷ್ಟು ಫಲಿಸುತ್ತದೆ ಎಂಬುದನ್ನು ಪರಿಶೀಲಿಸುವುದು? | 1 | 2 | 3 | 4 | 5 |

**ಸಮೀಕ್ಷೆಯನ್ನು ಪೂರ್ಣಗೊಳಿಸಿದ್ದಕ್ಕೆ ಧನ್ಯವಾದಗಳು!**